ಲಕ್ಷ್ಮೀಕಾಂತ ಬಾರೊ, ಶುಭ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 505.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 63.
3. **Note:** This song is not available in the books of Prof. S.K. Ramachandra Rao.
4. **Note:** Lyrics given here are as per Ref. 1. The wordings in Ref. 2 are same except minor differences which are not considered here.
5. **Note:** Singer has followed these wordings.
6. **Note:** Ankita is different in both the books. We have considered book in Ref.1 as standard and taken that Ankita for listing.

ರಾಗ: ಶಂಕರಾಭರಣ ತಾಳ: ಆದಿ

ಲಕ್ಷ್ಮೀಕಾಂತ ಬಾರೋ ಶುಭ ಲಕ್ಷಣವಂತ ಬಾರೋ
ಪಕ್ಷಿವಾಹನವೇರಿದವನೆ ಬಾರೋ ಪಾವನಮೂರ್ತಿ ಬಾರೋ ॥ ಪ ॥

ಆದಿಮೂಲ ವಿಗ್ರಹ ವಿನೋದಿ ನೀನೆ ಬಾರೋ
ಸಾಧು ಸಜ್ಜನ ಸತ್ಯಯೋನಿ ದಾನಿ ನೀನೆ ಬಾರೋ ॥ ೧ ॥

ಗಾಡಿಗಾರ ಕೃಷ್ಣ ನಿನ್ನ ಬೇಡಿಕೊಂಬೆ ಬಾರೋ
ರೂಢಿ ಮಾತನಾಡಿ ಸರ್ವ ರೂಢಿಗೊಡೆಯ ಬಾರೋ ॥ ೨ ॥

ನಿನ್ನ ಪಾದಂಗಳ ನಾನು ಬಣ್ಣಿಸಿ ಕರೆವೆ ಬಾರೋ
ಪನ್ನಗಶಯನ ಪುರಂದರ ವಿಠಲ ಬಾರೋ ॥ ೩ ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:

ಇದೊಂದು ಆವಾಹನ ಕೀರ್ತನೆ.

ಶುಭ ಲಕ್ಷಣವಂಥ = (ಭಾರತ ಅನುಶಾಸನ, ವಿಷ್ಣು ಸಹಸ್ರನಾಮ ೮೪-೮೫)

ಆದಿ ಮೂಲ ವಿಗ್ರಹ = ವಿಶ್ವಕ್ಕೆ ಮೂಲ ಕಾರಣನಾದ ಮೂರ್ತಿ

ವಿನೋದಿ = ವಿನೋದಕ್ಕಾಗಿ ಜಗತ್ತನ್ನು ಸೃಷ್ಟಿಸುವವ

ಸಾಧು ಸಜ್ಜನ ಸತ್ಯ ಯೋನಿ = ಸಾಧು ಸಜ್ಜನರಿಗೆ ನಿಜವಾದ ಉತ್ಪತ್ತಿ ಕಾರಣ (ಭಾಗವತ ೧೦, ೨ - ೨೬)

ರೂಢಿ ಮಾತು = ಸಲುಗೆಯ ನುಡಿ

ರೂಢಿಗೊಡೆಯ = ಪೃಥ್ವಿ ಪತಿ

ಗಾಡಿಕಾರ = ಸುಂದರ, ಬೆಡಗುಗಾರ

Classification: Keerthane
Ankita: purandara vittala
Location: NA
Category: Binnaha, Pooja Tatva,
Sub-Category: Vishnu, Lakshmi, shubha, pakshi, santosha, dana, Krishna,
Pravachana: NA
Explanation: NA